**<u>ದಿನಾಂಕಃ 17.10.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು ಮಧ್ಯಂತರ ಅರ್ಜಿ ಆದೇಶದ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಡಿ ಜಿ ಆರ್. ವಾದಿ ಪರ ವಕೀಲರಿಂದ</u>**

ವಂಶವೃಕ್ಷದ ದೃಡೀಕರಣ ಪತ್ರವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.31 ಅಂತ ಗುರುತಿಸಲಾಯಿತು. ಸದರಿ ದಾಖಲೆಗೆ ಲಗತ್ತಾಗಿರುವ ನೋಟರೀಕೃತ ವಂಶವೃಕ್ಷವನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.31(ಎ) ಅಂತ ಗುರುತಿಸಲಾಯಿತು.

ಕುಟುಂಬ ಸದಸ್ಯರುಗಳ ವಿವರದ ನೋಟರೀಕೃತ ಪ್ರತಿಯನ್ನು ಹಾಜರು ಪಡಿಸಿರುತ್ತೇನೆ ಅದನ್ನು ನಿಪಿ.32 ಅಂತ ಗುರುತಿಸಲಾಯಿತು.



**<u>ಮುಂದುವರಿದ ಪಾಟಿ ಸವಾಲುಃ ಶ್ರೀ ಹೆಚ್.ಎನ್. ಪ್ರತಿವಾದಿ ಪರ ವಕೀಲರಿಂದ</u>**

ನಿಪಿ.31 ಅನ್ನು 20.10.2022 ರಂದು ನೀಡಲಾಗಿರುತ್ತದೆ. ನೇ ಪ್ರತಿವಾದಿಯು ಭಕ್ತ ಪಣಿಯಪ್ಪನ ವಂಶಸ್ಥರಲ್ಲ ಎಂದು ಈ ದಾವೆಯನ್ನು ಸಲ್ಲಿಸಲಾಗಿರುತ್ತದೆ. 1 ನೇ ಪ್ರತಿವಾದಿಯು ಭಕ್ತ ಪಣಿಯಪ್ಪನ ವಂಶಸ್ಥರಲ್ಲ ಎಂದು ತೋರಿಸಲು ವಂಶವೃಕ್ಷವನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಯು ನಿಶಾನೆಗಳನ್ನು ಪರಿಶೀಲಿಸಿ ಯಾವ ದಾಖಲೆ ಎಂದು ಗುರುತಿಸಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ.31 ರ ದಖಲೆಯನ್ನು ಪಡೆಯಲು ತಹಸೀಲ್ದಾರ್ ರವರ ಕಚೇರಿಗೆ ಪೂಜಾರಿ ಶಿವರುದ್ರಪ್ಪ ಬಿನ್ ಲೇಟ್ ಪೂಜಾರಿ ಚನ್ನಪ್ಪ, ಪೂಜಾರಿ ಶಿವಣ್ಣ, ಮಹಾಂತಪ್ಪ, ರುದ್ರಮುನಿಯಪ್ಪ, ಫಣಿಯಪ್ಪ ರವರ ಮರಣ ಪ್ರಮಾಣ ಪತ್ರಗಳನ್ನು, ಆಧಾರ್ ಕಾರ್ಡ್, ರೇಷನ್ ಕಾರ್ಡ್ ಗಳನ್ನು ನೀಡಿರುತ್ತೇನೆ.

ನಿಪಿ.31(ಎ) ರಲ್ಲಿ ಪೂಜಾರಿ ಶಿವರುದ್ರಪ್ಪನ ಮಗ ಶಿವಣ್ಣ ಯಾನೆ ಪೂಜಾರಿ ಶಿವಣ್ಣ ಎಂದು ಇರುತ್ತದೆ ಎಂದರೆ ಸರಿ. ಸದರಿ ಶಿವಣ್ಣ ಯಾನೆ ಪೂಜಾರಿ ಶಿವಣ್ಣನವರಿಗೆ ಒಟ್ಟು ನಾಲ್ಕು ಜನ ಮಕ್ಕಳು. ಸದರಿಯವರುಗಳೆಂದರೆ ಮಹಾಂತಪ್ಪ, ತಿಪ್ಪೇಸ್ವಾಮಿ, ರುದ್ರಮುನಿಯಪ್ಪ ಮತ್ತು ಫಣಿಯಪ್ಪ. ಮಹಾಂತಪ್ಪ ರವರ ವಾರಸುದಾರರನ್ನು ಈ ದಾವೆಯಲ್ಲಿ ವಾದಿಯರನ್ನಾಗಿ ಸೇರಿಸಲಾಗಿರುತ್ತದೆ ಎಂದರೆ ಸರಿ. ರುದ್ರಮುನಿಯಪ್ಪರವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿರುವುದಿಲ್ಲ ಎಂದರೆ ಸಾಕ್ಷಿಯು ಹೆಣ್ಣು ಮಕ್ಕಳು ಇಲ್ಲದೇ ಇರುವ ಕಾರಣ

ದಾವೆಯಲ್ಲಿ ಸೇರಿಸಿರುವುದಿಲ್ಲ ಎಂದು ನುಡಿಯುತ್ತಾರೆ.

ತಿಪ್ಪೇಸ್ವಾಮಿಯವರ ವಾರಸುದಾರರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಸೇರಿಸಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರಿದು ಸದರಿಯವರು ನೀವೇ ದಾವೆ ಸಲ್ಲಿಸಿಕೊಳ್ಳಿ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ . ಸದರಿ ವಿಚಾರಕ್ಕೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಯಾವುದೇ ದಾಖಲೆಯನ್ನು ಹಾಜರು ಪಡಿಸಿರುವುದಿಲ್ಲ.

**( ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರಿದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.